**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 9051/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ಶೋಭ |
| ಗಂಡನ ಹೆಸರು | : | ಕುಮಾರ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ದೇವಿರಮ್ಮನಹಳ್ಳಿ ಗೇಟ್, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 04.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ-1 ನನ್ನ ತಂಗಿ. ಆರೋಪಿಗಳು ನಮ್ಮ ಅಂಗಡಿಯಲ್ಲಿ ಬಾಡಿಗೆದಾರರಾಗಿದ್ದರು. ಅಂಗಡಿಯ ಬಾಡಿಗೆ ಕೊಡುವ ವಿಚಾರವಾಗಿ ನಮಗು ಮತ್ತು ಆರೋಪಿಗಳಿಗು ಬಾಯಿಮಾತಿನ ಚರ್ಚೆಯಾಗಿದ್ದು, ಇಷ್ಟಕ್ಕೆ ನನ್ನ ತಂಗಿ ಹೆದರಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗಿರುತ್ತಾರೆ. ಆರೋಪಿಗಳು ನನ್ನ ತಂಗಿಯನ್ನು ಅಕ್ರಮವಾಗಿ ತಡೆದು, ಯಾವುದೇ ರೀತಿ ಹಲ್ಲೆ ಮಾಡಿಲ್ಲ, ನನ್ನ ತಂಗಿಗೆ ಅವಮಾನವಾಗುವಂತೆ ನಡೆದುಕೊಂಡಿಲ್ಲ, ನನಗೂ ಯಾವುದೇ ರೀತಿ ಹಲ್ಲೆ ಮಾಡಿಲ್ಲ ಮತ್ತು ಯಾವುದೇ ಜೀವ ಬೆದರಿಕೆ ಹಾಕಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲುಃ ಸ.ಸ.ಅ ರವರಿಂದಃ**

**ಸಿ.ಡಬ್ಲ್ಯೂ-2 / ಪಿ.ಡಬ್ಲ್ಯೂ-2**

ದಿನಾಂಕ 29.03.2022 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-1 ದೇವಿರಮ್ಮನಹಳ್ಳಿ ಗೇಟ್ ಬಳಿ ಇರುವ ನಮ್ಮ ಮನೆಯ ಮುಂಭಾಗದಲ್ಲಿರುವಾಗ ಆರೋಪಿಗಳು ಅಂಗಡಿ ಖಾಲಿ ಮಾಡಿ ಎಂದು ಹೇಳಿರುವ ವಿಚಾರವಾಗಿ ಮನಸ್ತಾಪ ಹೊಂದಿ ಚಾಸಾ-1 ರವರನ್ನು ಅಕ್ರಮವಾಗಿ ತಡೆದು, ಚಾಸಾ-1 ರವರ ಕೈ ಹಿಡಿದು ಎಳೆದಾಡಿ, ಹಲ್ಲೆ ಮಾಡಿ ಅವರಿಗೆ ಅವಮಾನ ಮಾಡಿ, ಕಲ್ಲಿನಿಂದ ಚಾಸಾ-1 ರವರ ಕೆಳದವಡೆಯ ಹಲ್ಲಿನ ಬಳಿ ಹೊಡೆದು ನೋವುಂಟು ಮಾಡಿದ್ದಲ್ಲದೆ, ದೊಣ್ಣೆಯಿಂದ ಚಾಸಾ-1 ರವರ ಹೊಟ್ಟೆಗೆ ಮತ್ತು ಬಲಗೈಗೆ ಹೊಡೆದಿದ್ದು, ಚಾಕುವಿನಿಂದ ಹೊಡೆಯಲು ಬಂದಾಗ 4 ನೇ ಆರೋಪಿ ತನ್ನ ಕೈಯಿಂದ ಚಾಸಾ-1 ರವರ ಎದೆಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಜಗಳ ಬಿಡಿಸಲು ಬಂದ ನನ್ನನ್ನು ತಳ್ಳಿ ಗಾಯಪಡಿಸಿದ್ದು, ನಿಮ್ಮನ್ನು ಕೊಲೆ ಮಾಡುತ್ತೇವೆಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದಿದ್ದರಿಂದ ಕೆಂಪು ಶಾಹಿಯಿಂದ ಗುರುತಿಸಲಾದ ಸದರಿ ಹೇಳಿಕೆಯ ಭಾಗವನ್ನು **ನಿ.ಪಿ-4** ಎಂದು ಗುರುತಿಸಲಾಯಿತು. ಆರೋಪಿಗಳು ಹಾಗು ನಾನು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ** ಆರೋಪಿಗಳ ಪರ ವಕೀಲರಿಂದಃ ಏನೂ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**